SRI SRINIVASA EDUCATIONAL & CHARITABLE TRUST (R)
SAPTHAGIRI COLLEGE OF ENGINEERING
(Affiliated to Visveswaraya Technological University, Belgaum & Approved by AICTE - New Delhi)

# Letter of Recognition

Ref:SCE/SCEAA/119/16-17.

September 23, 2016

This is to certify that "Sapthagiri college of Engineering Alumni Association" No. 14/5, Chikkasandra, Hesaraghatta Main Road, Bangalore-57 is an alumni association that has been registered under association of registration Act 1960, Government of Karnataka at Sapthagiri College of Engineering in the year 2011-12, with the registration No DRB-N/SOR/89/2011-12.

Further the following are the nominated office bearers of Alumni Association:

Patron: PRINCIPAL,
President: Mr. Ankur Kacker,
Secretary: Abhishek Gopalkrishna and
Tresaurer: Keerti Joshi,

PRINCIPAL
Principal
Sapthagiri College of Engineering
Chikkasandra, Hesaraghatta Road
Bangalore - 560 057

14/5, Chikkasandra, Hesaraghatta Main Road, Bangalore - 560 057. KARNATAKA,
Tel : 2837 2800 / 01 / 02 / 03, 2313 0583 Fax : 080-2837 2797, E-mail : principal@sapthagiri.edu.in
Web : www.sapthagiri.edu.in

ಕರ್ನಾಟಕ ಸರ್ಕಾರ

ಸಹಕಾರ ಇಲಾಖೆ

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ
ಬೆಂಗಳೂರು ನಗರ ಜಿಲ್ಲೆ, ಉತ್ತರ ವಲಯ
ನಂ. 146, 3ನೇ ಮುಖ್ಯರಸ್ತೆ, 8ನೇ ಕ್ರಾಸ್
ಮಾರ್ಗೋಸ ರಸ್ತೆ, ಮಲ್ಲೇಶ್ವರಂ
ಮಲ್ಲೇಶ್ವರಂ, ಬೆಂಗಳೂರು-560 003.

ನೋಂದಣಿ ಸಂಖ್ಯೆ : 89 /2011-12.

ದಿನಾಂಕ : 28 -06-2011.

# ನೋಂದಣಿ ಪ್ರಮಾಣ ಪತ್ರ

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ, ಉತ್ತರ ವಲಯ, ಬೆಂಗಳೂರು ನಗರ ★ ಬೆಂಗಳೂರು ★

ನೋಂದಣಿ ಸಂಖ್ಯೆ : ಡಿಆರ್‌ಬಿ-ಎನ್/ಎಸ್‌ಓಆರ್/ 89 /2011-12.

ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಅಧಿನಿಯಮ 8ರ ಮೇರೆಗೆ ಕರ್ನಾಟಕ ಅಧಿನಿಯಮ ಮೇರೆಗೆ ಈಕೆಳಕಂಡ ಹೆಸರಿನ

ಸಪ್ತಗಿರಿ ಕಾಲೇಜ್ ಆಫ್ ಇಂಜಿನೀಯರಿಂಗ್ ಅಲ್ಯೂಮ್ನಿ

ಅಸೋಸಿಯೇಷನ್

ನಂ.೧೪/೫, ಚಿಕ್ಕಸಂದ್ರ,

ಹೆಸರಘಟ್ಟ ಮೈನ್ ರೋಡ್,

ಬೆಂಗಳೂರು-೫೬೦ ೦೫೭

ಸಂಘವನ್ನು ನೋಂದಾಯಿಸಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ನೋಂದಣಿ ಶುಲ್ಕ ರೂಪಾಯಿ (ಅಂಕಿಗಳಲ್ಲಿ) ರೂ.1,000-00

(ಅಕ್ಷರಗಳಲ್ಲಿ ಒಂದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲಾಗಿದೆ.

ಎರಡು ಸಾವಿರದ ಹನ್ನೊಂದನೇ ಇಸವಿ ಜೂನ್ ತಿಂಗಳು 28ನೇ ದಿನಾಂಕದಂದು ನನ್ನ ಸಹಿ ಮತ್ತು ಮುದ್ರೆಯೊಂದಿಗೆ ನೀಡಲ್ಪಟ್ಟಿದೆ.

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು,
ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

ಈ ದಸ್ತಾವೇಜು ... 16 ...ಪುಟಗಳನ್ನು ಒಳಗೊಂಡಿರುತ್ತದೆ
ದಸ್ತಾವೇಜು ಸಂಖ್ಯೆ......89/11-12......ಆಗಿರುತ್ತದೆ

# ಸಪ್ತಗಿರಿ ಕಾಲೇಜ್ ಆಫ್ ಇಂಜಿನೀಯರಿಂಗ್ ಅಲ್ಯೂಮ್ನಿ ಅಸೋಸಿಯೇಷನ್

ನಂ.14/5, ಚಿಕ್ಕಸಂದ್ರ, ಹೆಸರಘಟ್ಟ ಮೈನ್ ರೋಡ್, ಬೆಂಗಳೂರು-560 057.

ಜಿ. ನೋ ಬೆಂ ಉ

ರವರಿಗೆ

ಸಂಘಗಳ ನೋಂದಣಾಧಿಕಾರಿಗಳು,
ಬೆಂಗಳೂರು ಉತ್ತರ ವಲಯ,
ಬೆಂಗಳೂರು.

ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ★ ಬೆಂಗಳೂರು ★

ಸಹಾಯಕ ಸಂಘಗಳ ನೋಂದಣಾಧಿಕಾರಿಗಳ ಕಛೇರಿ, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
21 JUN 2011
ಕ:- ಎಸ್.11
ಕಡತ ಸಂಖ್ಯೆ 327/22-6-2011

ವಿಷಯ: ಸಂಘವನ್ನು ನೋಂದಣಿ ಮಾಡುವ ಬಗ್ಗೆ.

ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯನ್ವಯ 1960ರ ಮೇರೆಗೆ ಸಂಘವನ್ನು ನೋಂದಾಯಿಸಲು ಸಂಘದ ನಿವೇದನಾ ಪತ್ರಿಕೆ ಮತ್ತು ನಿಬಂಧನೆಗಳನ್ನು ಸಲ್ಲಿಸಿ ಹಾಗೂ ಅದಕ್ಕೆ ತಗಲುವ ನೋಂದಣಿ ಶುಲ್ಕವನ್ನು ತಮ್ಮ ಕಛೇರಿಯಲ್ಲಿ ಜಮಾ ಮಾಡಿ ನಮ್ಮ ಸಂಘವನ್ನು ನೋಂದಣಿ ಮಾಡಿ ಕೊಡಿ ಎಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು,

1. -
2. -
3.
4.
5.
6.
7.
8.

ಚಲನ್ ನಂ....161 1,000/-
ದಿನಾಂಕ....23-6-2011
ಸ್ಕ್ಯಾನಿಂಗ್ ಶುಲ್ಕ ರೂ....600/-
ರಸೀದಿ ಸಂಖ್ಯೆ....161
ದಿನಾಂಕ....23-6-2011

49/11-12 02

## ಸಪ್ತಗಿರಿ ಕಾಲೇಜ್ ಆಫ್ ಇಂಜಿನೀಯರಿಂಗ್ ಅಲ್ಯೂಮ್ನಿ ಅಸೋಸಿಯೇಷನ್

ನಂ.14/5, ಚಿಕ್ಕಸಂದ್ರ, ಹೆಸರಘಟ್ಟ ಮೈನ್ ರೋಡ್, ಬೆಂಗಳೂರು-560 057.

ನೋಂದಣಾಧಿಕಾರಿಗಳ ಕಛೇರಿ, ಉತ್ತರ ವಲಯ, ಬೆಂಗಳೂರು ನಗರ ... ಬೆಂಗಳೂರು.

### ಸಭೆಯ ನಡವಳಿಕೆಗಳು

ವಿಷಯ: ಸಂಘವನ್ನು ನೋಂದಾಯಿಸುವ ಬಗ್ಗೆ.

ದಿನಾಂಕ: 05-05-2011 ರಂದು ಸಂಘದ ಸದಸ್ಯರುಗಳು ಸಭೆ ಸೇರಿ ಆಡಳಿತ ಮಂಡಳಿಯ ಸದಸ್ಯರನ್ನು ಸರ್ವಾನುಮತದಿಂದ ಚುನಾಯಿಸಲಾಯಿತು ಮತ್ತು

**ಸಪ್ತಗಿರಿ ಕಾಲೇಜ್ ಆಫ್ ಇಂಜಿನೀಯರಿಂಗ್ ಅಲ್ಯೂಮ್ನಿ ಅಸೋಸಿಯೇಷನ್**

ಎಂಬ ಸಂಘವನ್ನು ಕರ್ನಾಟಕ ಸಂಘಗಳ ವಿಧಿಗಳನ್ವಯ ತಯಾರಿಸಿ ಒಪ್ಪಿಸಲಾಯಿತು ಮತ್ತು ಸಂಘಗಳ ನೋಂದಣಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಮಾಡಲು ಸಂಘದ ಪ್ರಧಾನ ಕಾರ್ಯದರ್ಶಿಯವರಿಗೆ ಅಧಿಕಾರವನ್ನು ನೀಡಲಾಯಿತು. ಈ ಸಂಘವನ್ನು ಕರ್ನಾಟಕ ಸಂಘಗಳ ವಿಧಿಗಳನ್ವಯ ನೋಂದಣಿ ಕಛೇರಿಯಲ್ಲಿ ನೋಂದಾಯಿಸ ಬೇಕೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ತತ್ಸಂಬಂಧವಾಗಿ ಸಂಘದ ಧ್ಯೇಯೋದ್ದೇಶಗಳನ್ನು ಮತ್ತು ನಿಬಂಧನೆಗಳನ್ನು ತಯಾರಿಸಿ ಒಪ್ಪಿಸಲಾಯಿತು.

1.
2.
3.
4.
5.
6.
7.
8.

ನೋಂದಣಿ ಸಂಖ್ಯೆ...89/11-12 ರ ಪುಸ್ತಕದಲ್ಲಿ...03

ಜ್ಞಾಪನಾ ಪತ್ರ

ಜಿ. ಸೋ. ಜಿ.ರಿ. ಅಗ

1. ಸಂಘದ ಹೆಸರು : ಸಪ್ತಗಿರಿ ಕಾಲೇಜ್ ಆಫ್ ಇಂಜಿನೀಯರಿಂಗ್ ಅಲ್ಯೂಮ್ನಿ ಅಸೋಸಿಯೇಷನ್.

2. ಸಂಘದ ವಿಳಾಸ : ನಂ.14/5, ಚಿಕ್ಕಸಂದ್ರ, ಹೆಸರಘಟ್ಟ ಮೈನ್ ರೋಡ್, ಬೆಂಗಳೂರು-560 057.

3. ಸಂಘದ ಕಾರ್ಯವ್ಯಾಪ್ತಿ: ಬೆಂಗಳೂರು ನಗರ ಜಿಲ್ಲೆ, ಕರ್ನಾಟಕ.

4. ಸಂಘದ ಉದ್ದೇಶಗಳು:-

1. ಸಪ್ತಗಿರಿ ಕಾಲೇಜ್ ಆಫ್ ಇಂಜಿನೀಯರಿಂಗ್ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡಿರುವ ಮತ್ತು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿ ಮತ್ತು ಶಿಕ್ಷಕರ ವೃಂದದಲ್ಲಿ ಉತ್ತಮ ಸಂಬಂಧವನ್ನೇರ್ಪಡಿಸುವುದು ಮತ್ತು ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು.

2. ಎಲ್ಲಾ ವಿದ್ಯಾರ್ಥಿಗಳ ನಡುವೆ ಉತ್ತಮವಾದ ಬಾಂಧವ್ಯ ಬೆಸೆಯುವಂತಹ ಕೆಲಸ ಮಾಡುವುದು. ಮತ್ತು ಅವರ ನಡುವೆ ಪರಸ್ಪರ ಸಹಾಯ, ಸಹಕಾರ ಮನೋಭಾವನೆಯನ್ನು ಬೆಳೆಸುವುದು.

3. ಬಡ ಮತ್ತು ಪ್ರತಿಭವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಆರ್ಥಿಕ ನೆರವು ನೀಡಿ, ಅವರ ವಿದ್ಯಾಭ್ಯಾಸಕ್ಕೆ ನೆರವಾಗುವುದು.

4. ವಿದ್ಯಾರ್ಥಿಗಳ ವರ್ಗದಲ್ಲಿ ದೇಶಭಕ್ತಿ ಮತ್ತು ವ್ಯಕ್ತಿತ್ವ ಬೆಳವಣಿಗೆಯನ್ನು ಬೆಳೆಸುವುದು ಮತ್ತು ಅದಕ್ಕಾಗಿ ಸಂಸ್ಥೆಯ ಆಡಳಿತ ವರ್ಗದೊಂದಿಗೆ ಸಹಕರಿಸುವುದು.

5. ವಿದ್ಯಾರ್ಥಿಗಳ ಔಪಾಚರಿಕ ಮತ್ತು ಅನೌಪಾಚಾರಿಕ ಸಮಾವೇಶಗಳನ್ನು ಆಯೋಜಿಸುವುದು.

6. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕಾರ್ಯಗಾರ/ಸೆಮಿನಾರ್/ಸಭೆಗಳನ್ನು ನಡೆಸುವುದು ಮತ್ತು ಇದರಿಂದ ವಿದ್ಯಾರ್ಥಿಗಳಿಗೆ ತಮ್ಮ ಜ್ಞಾನ ಮತ್ತು ಸಂಪರ್ಕಗಳನ್ನು ಹೆಚ್ಚಿಸಿಕೊಳ್ಳಲು ಅವಕಾಶ ಮಾಡಿಕೊಡುವುದು.

7. ಸಮಾಜಕ್ಕೆ ಸಹಾಯ ಮಾಡುವುದಕ್ಕಾಗಿ, ವಿದ್ಯಾರ್ಥಿಗಳಿಗೆ ಸ್ವಯಂ ಸೇವಾ ಕಾರ್ಯಗಳು/ಸಮಾಜ ಸೇವೆಗೆ ವೇದಿಕೆ ಒದಗಿಸುವುದು.

8. ಕರ್ನಾಟಕ ರಾಜ್ಯ ಮತ್ತು ಬೇರೆ ರಾಜ್ಯಗಳ ಪ್ರದೇಶಗಳಲ್ಲಿ ವಾಸವಾಗಿರುವ ವಿದ್ಯಾರ್ಥಿಗಳ ಜಾಲಬಂಧ ಕೇಂದ್ರ (ನೆಟವರ್ಕ್) ವನ್ನು ನಡೆಸುವುದು.

9. ಸಧರಿ ಸಂಘವು ಬೇರೆ ಸಂಘ-ಸಂಸ್ಥೆಗಳೊಂದಿಗೆ ಸಂಪರ್ಕವನ್ನು ಬೆಳೆಸಿ, ಸಂಘವನ್ನು ಅಭಿವೃದ್ಧಿಪಡಿಸುವುದು.

10. ಸಂಘವು ತನ್ನ ಧ್ಯೇಯೋದ್ದೇಶಗಳನ್ನು ಸಾಧಿಸಲು ಸಹಾಯ ಮಾಡುವ ದೃಷ್ಟಿಯಿಂದ ವಿದ್ಯಾರ್ಥಿಗಳು ತಮ್ಮ ಜ್ಞಾನ, ಅನುಭವ, ಕೌಶಲ್ಯ, ಬಲ ಇತ್ಯಾದಿಗಳನ್ನು ಯಾವುದೇ ರೀತಿಯಲ್ಲಿ ತಾವು ಇಚ್ಛಿಸುವಷ್ಟು ಅವಧಿಯವರೆಗೂ ಸೇವೆಯನ್ನು ನೀಡಲು ಒಟ್ಟಾಗಿ ಸೇರುವ ಒಂದು ವೇದಿಕೆಯನ್ನು ನಿರ್ಮಿಸುವುದು.

11. ಸಧರಿ ವಿದ್ಯಾ ಸಂಸ್ಥೆಯು ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿರುವ ಒಂದು ವಿದ್ಯಾ ಸಂಸ್ಥೆಯಾಗಿ ರೂಪಿಸುವ ರೀತಿಯಲ್ಲಿ ಸಂಘಕ್ಕೆ ತನ್ನ ಕೊಡುಗೆ ನೀಡುವಂತಹ ಚಟುವಟಿಕೆಗಳ್ನು ಕೈಗೊಳ್ಳುವುದು.

ದಸ್ತಾವೇಜು ಸಂಖ್ಯೆ 89/11-12 ಹಾಳೆಗಳ ಸಂಖ್ಯೆ 04

12. ವಿದ್ಯಾರ್ಥಿಗಳ ಅಭಿವೃದ್ಧಿ ದೃಷ್ಟಿಯಿಂದ ವಿದ್ಯಾರ್ಥಿಗಳ ಮತ್ತು ಅವರ ಕುಟುಂಬದವರಿಗಾಗಿ ಉಪನ್ಯಾಸಗಳು, ಸೆಮಿನಾರ್‌ಗಳು, ಸಮ್ಮೇಳನಗಳು, ಸಭೆಗಳು ಮತ್ತು ಔತಣಕೂಟಗಳನ್ನು ಏರ್ಪಡಿಸುವುದು.

13. ಸಮಾಜದ ಬಡ ಜನರ, ನಿರ್ಗತಿಕರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಪುಸ್ತಕ ನೀಡುವುದು, ಅವರ ಓದಿಗೆ ಅವಶ್ಯಕವಾದ ಪೂರಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

14. ಶೈಕ್ಷಣಿಕ ಹಾಗೂ ವೃತ್ತಿಪರ ತರಬೇತಿ ಸೌಲಭ್ಯಗಳ ವರ್ಧನೆ ಹಾಗೂ ಅಭಿವೃದ್ಧಿಗಾಗಿ ಕಾಲೇಜಿಗೆ ಸಹಾಯ ಮತ್ತು ಸಲಹೆ ನೀಡುವುದು.

15. ಆಧುನಿಕ ಶಿಕ್ಷಣ ಪದ್ಧತಿಗಳು ಮತ್ತು ಅಧುನಿಕ ವಿಚಾರಧರೆಗಳ ಬಗ್ಗೆ ವಿಚಾರ ಗೋಷ್ಠಿಗಳು, ಚರ್ಚಾ ಗೋಷ್ಠಿಗಳು, ಪ್ರವಚನ ಮಾಲಿಕೆಗಳು, ತರ್ಕ ಗೋಷ್ಠಿಗಳು, ಸಮ್ಮೇಳನಗಳನ್ನು ಏರ್ಪಡಿಸುವುದು.

16. ಸಂಘದ ಉದ್ದೇಶಗಳ ಅನುಗುಣವಾಗಿರುವ ಯಾವುದೇ ವಿಚಾರ ಅಥವಾ ಚಟುವಟಿಕೆ ವಿಶೇಷ ನಿಧಿ ಅಥವಾ ನ್ಯಾಸ ಅಥವಾ ಸಮಿತಿಗಳನ್ನು ರಚಿಸುವುದು.

17. ಸಂಘದ ಸದಸ್ಯರುಗಳು ಮತ್ತು ವಿದ್ಯಾರ್ಥಿಗಳ ವರ್ಗದಲ್ಲಿ ಸಮಾನತೆ, ಸಹೋದರತೆ ಮೊದಲಾದ ಉನ್ನತ ಭಾವನೆಗಳನ್ನು ಬೆಳೆಸುವುದು.

18. ಉಚಿತ ವಾಚನಾಲಯ ಮತ್ತು ಗ್ರಂಥಾಲಯಗಳನ್ನು ಸ್ಥಾಪಿಸುವುದು.

19. ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ, ನೇತ್ರ ಚಿಕಿತ್ಸೆ ಶಿಬಿರಗಳನ್ನು ಏರ್ಪಡಿಸುವುದು.

20. ಸಾರ್ವಜನಿಕ ಮೂಲಭೂತ ಹಕ್ಕುಗಳ ಬಗ್ಗೆ ತಿಳುವಳಿಕೆ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ಅವರಿಗೆ ಕಾನೂನು ಸಲಹಾ ಕೇಂದ್ರ ಸಮಿತಿಗಳನ್ನು ನಡೆಸುವುದು.

5. ಸಂಘದಲ್ಲಿ ಉತ್ಪತ್ತಿಯಾಗುವ ಹಣವನ್ನು ಸಂಘದ ಅಭಿವೃದ್ಧಿಗಾಗಿ ಉಪಯೋಗಿಸುವುದು. ಯಾವುದೇ ಕಾರಣದಿಂದ ಆ ಹಣವನ್ನು ಸದಸ್ಯರಿಗೆ ಹಂಚಲಾಗುವುದಿಲ್ಲ.

6. ಈ ನಿವೇದನಾ ಪತ್ರಿಕೆ ಮತ್ತು ನಿಬಂಧನೆಗಳನ್ನು ಸಲ್ಲಿಸಲು ಹಾಗೂ ನೋಂದಣಾಧಿಕಾರಿಗಳೊಂದಿಗೆ ಪತ್ರ ವ್ಯವಹಾರ ಸಂಘದ ಪ್ರಧಾನ ಕಾರ್ಯದರ್ಶಿಯವರಿಗೆ ಅಧಿಕಾರವನ್ನು ನೀಡಲಾಗಿದೆ.

1. [signature]
2. [signature]
3. [signature]
4. [signature]
5. [signature]
6. [signature]
7. [signature] Pushpa B.V
8. [signature]

ಸಂಘದ ಹೆಸರು: [illegible]
ದಾಖಲೆಗಳ ವಿವರ: ಪ್ರತಿಗಳ ಪತ್ರ
ಸ್ವೀಕರಿಸಿದ ದಿನಾಂಕ: 21-06-2011
ನೋಂದಣಿ ಸಂಖ್ಯೆ: 89/11-12
ರಿಜಿಸ್ಟರ್‌ನಲ್ಲಿನ ಕ್ರಮಸಂಖ್ಯೆ: 89/11-12
ವಿಲೇಯಾದ ವಿವರ: ನೋಂದಾಯಿಸಿದೆ
ದಿನಾಂಕ: 24-06-2011

[signature]
ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು
ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು.

[signature] [signature]

ದಸ್ತಾವೇಜು ಸಂಖ್ಯೆ 9/1142 ಸಾಲು ಸಂಖ್ಯೆ 05

## ಸಪ್ತಗಿರಿ ಕಾಲೇಜ್ ಆಫ್ ಇಂಜಿನೀಯರಿಂಗ್ ಅಲ್ಯೂಮ್ನಿ ಅಸೋಸಿಯೇಷನ್

ನಂ.14/5, ಚಿಕ್ಕಸಂದ್ರ, ಹೆಸರಘಟ್ಟ ಮೈನ್ ರೋಡ್, ಬೆಂಗಳೂರು-560 057

### ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ

ಕ್ರ.ಸಂ. ಹೆಸರು ಮತ್ತು ಹೆಸರು — ವಯಸ್ಸು — ಉದ್ಯೋಗ — ಹುದ್ದೆ — ರುಜು

ಶ್ರೀಮತಿ/ಶ್ರೀಯುತರಾದ :-

01. ಜಿ.ದಯಾನಂದ್
ನಂ.42, 8ನೇ ಮೈನ್, 16ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-03.
ಸರ್ವೀಸ್ — ಗೌರವಾಧ್ಯಕ್ಷರು

02. ಡಾ: ವಿ.ಆರ್.ಮಂಜುನಾಥ್
ನಂ.3, ಕೃಷ್ಣಪ್ಪ ಲೇಔಟ್, ನಾಗಶೆಟ್ಟಿಹಳ್ಳಿ,
ಸಂಜಯನಗರ, ಬೆಂಗಳೂರು ಉತ್ತರ,
ಬೆಂಗಳೂರು-94.
ಸರ್ವೀಸ್ — ಅಧ್ಯಕ್ಷರು

03. ಈರಪ್ಪ
ನಂ.3103, ಇಂದಿರಾನಗರ 2ನೇ ಸ್ಟೇಜ್,
6ನೇ ಬಿ ಮೈನ್, ಗೌತಮಪುರ,
ಬೆಂಗಳೂರು.
ಸರ್ವೀಸ್ — ಉಪಾಧ್ಯಕ್ಷರು

04. ಸುನೀಲ್.ಡಿ.
ನಂ.1016/ಡಿ, 17ನೇ ಇ ಕ್ರಾಸ್,
ಇಂದಿರಾನಗರ, 2ನೇ ಸ್ಟೇಜ್,
ಬೆಂಗಳೂರು-38.
ಸರ್ವೀಸ್ — ಪ್ರಧಾನ ಕಾರ್ಯದರ್ಶಿ

05. ಡಾ: ಬಿ.ಎಸ್.ಕೃಷ್ಣ
ನಂ.164, 1ನೇ ಮೈನ್, ದ್ವಾರಕಾನಗರ,
ಚಿಕ್ಕಬಾಣಾವಾರ ಅಂಚೆ, ಬೆಂಗಳೂರು.
ಸರ್ವೀಸ್ — ಖಜಾಂಚಿ

06. ಪ್ರೋ.ಮಹೇಶ್.ಸಿ
ನಂ.130, 3ನೇ ಮೈನ್, ಹೆಚ್‌ವಿಆರ್ ಲೇಔಟ್,
ಕೆ.ಹೆಚ್.ಬಿ.ಕಾಲೋನಿ, ಮಾಗಡಿ ರೋಡ್,
ಬೆಂಗಳೂರು-79.
ಸರ್ವೀಸ್ — ಸದಸ್ಯರು

07. ಪ್ರೋ.ಪುಷ್ಪ.ಬಿ.ವಿ.
ನಂ.ಯು-9/25, 1ನೇ ಮೈನ್,
2ನೇ ಎ ಕ್ರಾಸ್, ನಂದಿನಿ ಲೇಔಟ್,
ಸರಸ್ವತಿಪುರಂ, ಬೆಂಗಳೂರು.
ಸರ್ವೀಸ್ — ಸದಸ್ಯರು

08. ರಮೇಶ್ ಮಾಡ್ಕೆ
ನಂ.156, 7ನೇ ಕ್ರಾಸ್, ವಿಜಯಲಕ್ಷ್ಮಿ
ಬಡಾವಣೆ, ಬಾಗಲಕೋಟೆ, ಬೆಂಗಳೂರು-73.
ಸರ್ವೀಸ್ — ಸದಸ್ಯರು

ಸಾಕ್ಷಿಗಳು: ಹೆಸರು ಮತ್ತು ವಿಳಾಸ — ವಯಸ್ಸು — ಉದ್ಯೋಗ — ರುಜು

(1) — 35 — Busin

ದಸ್ತಾವೇಜು ಸಂಖ್ಯೆ... 99/11-12 ರ ಪುಟಸಂಖ್ಯೆ... 14

## ಸಪ್ತಗಿರಿ ಕಾಲೇಜ್ ಆಫ್ ಇಂಜಿನೀಯರಿಂಗ್ ಅಲ್ಯೂಮ್ನಿ ಅಸೋಸಿಯೇಷನ್

ನಂ.14/5, ಚಿಕ್ಕಸಂದ್ರ, ಹೆಸರಘಟ್ಟ ಮೈನ್ ರೋಡ್, ಬೆಂಗಳೂರು-560 057.

### ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ:

ಕ್ರ.ಸಂ. ಹೆಸರು ಮತ್ತು ಹೆಸರು — ವಯಸ್ಸು — ಉದ್ಯೋಗ — ಪದವಿ — ರುಜು

ಶ್ರೀಮತಿ/ಶ್ರೀಯುತರಾದ :-

01. ಜಿ.ದಯಾನಂದ್
ನಂ.42, 8ನೇ ಮೈನ್, 16ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-03.
ಸರ್ವೀಸ್ — ಗೌರವಾಧ್ಯಕ್ಷರು



02. ಡಾಃ ವಿ.ಆರ್.ಮಂಜುನಾಥ್
ನಂ.3, ಕೃಷ್ಣಪ್ಪ ಲೇಔಟ್, ನಾಗಶೆಟ್ಟಿಹಳ್ಳಿ,
ಸಂಜಯನಗರ, ಬೆಂಗಳೂರು ಉತ್ತರ,
ಬೆಂಗಳೂರು-94.
ಸರ್ವೀಸ್ — ಅಧ್ಯಕ್ಷರು



03. ಈರಪ್ಪ
ನಂ.3103, ಇಂದಿರಾನಗರ 2ನೇ ಸ್ಟೇಜ್,
6ನೇ ಬಿ ಮೈನ್, ಗೌತಮಪುರ,
ಬೆಂಗಳೂರು.
ಸರ್ವೀಸ್ — ಉಪಾಧ್ಯಕ್ಷರು



04. ಸುನೀಲ್.ಡಿ.
ನಂ.1016/ಡಿ, 17ನೇ ಇ ಕ್ರಾಸ್,
ಇಂದಿರಾನಗರ, 2ನೇ ಸ್ಟೇಜ್,
ಬೆಂಗಳೂರು-38.
ಸರ್ವೀಸ್ — ಪ್ರಧಾನ ಕಾರ್ಯದರ್ಶಿ



05. ಡಾಃ ಬಿ.ಎಸ್.ಕೃಷ್ಣ
ನಂ.164, 1ನೇ ಮೈನ್, ದ್ವಾರಕಾನಗರ,
ಚಿಕ್ಕಬಾಣವಾರ ಅಂಚೆ, ಬೆಂಗಳೂರು.

ಸರ್ವೀಸ್ ಖಜಾಂಚಿ



06. ಪ್ರೊ.ಮಹೇಶ್.ಸಿ
ನಂ.130, 3ನೇ ಮೈನ್, ಹೆಚ್‌ವಿಆರ್ ಲೇಔಟ್,
ಕೆ.ಹೆಚ್.ಬಿ.ಕಾಲೋನಿ, ಮಾಗಡಿ ರೋಡ್,
ಬೆಂಗಳೂರು-79.

ಸರ್ವೀಸ್ ಸದಸ್ಯರು



07. ಪ್ರೊ.ಪುಷ್ಪ.ಬಿ.ವಿ.
ನಂ.ಯು-9/25, 1ನೇ ಮೈನ್,
2ನೇ ಎ ಕ್ರಾಸ್, ನಂದಿನಿ ಲೇಔಟ್,
ಸರಸ್ವತಿಪುರಂ, ಬೆಂಗಳೂರು.

ಸರ್ವೀಸ್ ಸದಸ್ಯರು



08. ರಮೇಶ್ ಮಣ್ಣೆ
ನಂ.156, 7ನೇ ಕ್ರಾಸ್, ವಿಜಯಲಕ್ಷ್ಮಿ
ಬಡಾವಣೆ, ಬಾಗಲಕೋಟೆ, ಬೆಂಗಳೂರು-73.

ಸರ್ವೀಸ್ ಸದಸ್ಯರು



| ಸಾಕ್ಷಿಗಳುಃ ಹೆಸರು ಮತ್ತು ವಿಳಾಸ | ವಯಸ್ಸು | ಉದ್ಯೋಗ | ರುಜು |
|---|---|---|---|
| (1) [signature] | 25 | [illegible] | |

ದಸ್ತಾವೇಜು ಸಂಖ್ಯೆ 89/11-12 ಪುಟಸಂಖ್ಯೆ 16

ಜಿ. ನೋಂ. ಸಿ. ...

ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ, ಉತ್ತರ ವಲಯ, ಬೆಂಗಳೂರು

[illegible]

ಸಂಘದ ಹೆಸರು: [illegible]

ದಾಖಲೆಗಳ ವಿವರ: 01-06-2011

ಸ್ವೀಕರಿಸಿದ ದಿನಾಂಕ: 89/11-12

ನೋಂದಣಿ ಸಂಖ್ಯೆ: 89/11-12

ರಿಜಿಸ್ಟ್ರಾರ್‌ನಲ್ಲಿನ ಕ್ರಮಸಂಖ್ಯೆ: [illegible]

ವಿಲೇಯಾದ ವಿವರ: 28-06-2011

ದಿನಾಂಕ:

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು
ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು.

89 / 11-12 ... 02

## ಸಂಘದ ನಿಯಮ ನಿಬಂಧನೆಗಳು

ಈ ನಿಬಂಧನೆಗಳು ಸಂಘದ ನಿವೇದನಾ ಪತ್ರಿಕೆಯಲ್ಲಿ ನಮೂದಿಸಿರುವ ಉದ್ದೇಶಗಳನ್ನು ಈಡೇರಿಸುವ ಉದ್ದೇಶದಿಂದ ರಚಿಸಲ್ಪಟ್ಟಿರುತ್ತವೆ.

1. ಸಂಘದ ಹೆಸರು : ಸಪ್ತಗಿರಿ ಕಾಲೇಜ್ ಆಫ್ ಇಂಜಿನೀಯರಿಂಗ್ ಅಲ್ಯೂಮ್ನಿ ಅಸೋಸಿಯೇಷನ್.

2. ಸಂಘದ ವಿಳಾಸ : ನಂ.14/5, ಚಿಕ್ಕಸಂದ್ರ, ಹೆಸರಘಟ್ಟ ಮೈನ್ ರೋಡ್, ಬೆಂಗಳೂರು-560 057.

3. ಸಂಘದ ಸದಸ್ಯತ್ವ:-

ಎ. ಸಂಘದ ದ್ಯೇಯೋದ್ದೇಶಗಳನ್ನು ಅಂಗೀಕರಿಸಿ ಸಂಘದೊಡನೆ ಸಹಕರಿಸುವ ಭಾರತ ಒಪ್ಪಂದ ಕಾಯ್ದೆ ರೀತ್ಯಾ ಅರ್ಹತೆ ಹೊಂದಿದ್ದು, 18 ವರ್ಷ ಮೇಲ್ಪಟ್ಟ ಹಾಗೂ ಸಪ್ತಗಿರಿ ಕಾಲೇಜ್‌ನಲ್ಲಿ ವಿದ್ಯಾಭ್ಯಾಸ ಮಾಡಿದಂತಹ ಮತ್ತು ವಿದ್ಯಾಭ್ಯಾಸ ಮಾಡುತ್ತಿರುವ ವ್ಯಕ್ತಿಗಳು ಮತ್ತು ಕಾಲೇಜಿನ ಉಪನ್ಯಾಸಕರ ವರ್ಗದವರು ಸಂಘದ ಸದಸ್ಯತ್ವ ಪಡೆಯಬಹುದಾಗಿರುತ್ತದೆ.

ಬಿ. ಸಂಘದ ಸದಸ್ಯತ್ವ ವರ್ಗವು ಈ ಕೆಳಕಂಡ ವರ್ಗಗಳಿಂದ ಕೂಡಿರುತ್ತದೆ.
1. ಅಜೀವ ಸದಸ್ಯತ್ವ ರೂ.1,000-00, 2.ವಾರ್ಷಿಕ ಸದಸ್ಯತ್ವ ರೂ.250-00, 3.ಪ್ರವೇಶ ದನ ರೂ.25-00.

ಸಿ. ಸಂಘದ ಸದಸ್ಯರಾಗಿ ಸೇರಬಯಸುವ ವ್ಯಕ್ತಿಯು ಸದಸ್ಯತ್ವಕ್ಕೆ ಅರ್ಜಿಯನ್ನು ಪ್ರವೇಶ ಧನ ಮತ್ತು ಚಂದಾ ಹಣದೊಡನೆ ಸಂಘಕ್ಕೆ ಸಲ್ಲಿಸಬೇಕು. ಅಂತಹವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಪ್ರಧಾನ ಕಾರ್ಯದರ್ಶಿ / ಅಧ್ಯಕ್ಷರವರಿಗೆ ಅಧಿಕಾರವಿದ್ದು, ಅದಕ್ಕೆ ಮುಂದಿನ ಕಾರ್ಯಕಾರಿ ಸಮಿತಿಯ ಒಪ್ಪಿಗೆಯನ್ನು ಪಡೆಯತಕ್ಕದ್ದು. ಯಾವ ಕಾರಣದಿಂದಲೂ ಸದಸ್ಯತ್ವದ ಅರ್ಜಿಯನ್ನು ಒಪ್ಪಿಕೊಳ್ಳದಿದ್ದರೆ ಸದರಿ ಅರ್ಜಿದಾರರಿಗೆ 15 ದಿನಗಳೊಳಗಾಗಿ ಕಾರಣಗಳ ಸಮೇತ ತಿಳಿಯಪಡಿಸತಕ್ಕದ್ದು.

4. ಪ್ರವೇಶ ಪತ್ರ:-

ಸದಸ್ಯರಾಗಿ ಸೇರಲು ಇಚ್ಛಿಸುವವರು ಪ್ರವೇಶ ಪತ್ರವನ್ನು ಭರ್ತಿ ಮಾಡಿ ಆಯಾ ವರ್ಗಕ್ಕೆ ಗೊತ್ತು ಮಾಡಿರುವ ಚಂದಾ ಮತ್ತು ಪ್ರವೇಶ ಪತ್ರವನ್ನು ಸಲ್ಲಿಸತಕ್ಕದ್ದು.

5. ಸದಸ್ಯರ ಹಕ್ಕು ಬಾಧ್ಯತೆಗಳು:-

ಸಂಘದ ಸದಸ್ಯತ್ವ ಅಂಗೀಕಾರವಾದ ದಿನದಿಂದ ಸಂಘವು ಕೈಗೊಳ್ಳುವ ಎಲ್ಲಾ ಸಾಮಾನ್ಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಎಲ್ಲಾ ಸದಸ್ಯರಿಗೂ ಉಚಿತ ಪ್ರವೇಶವಿರುತ್ತದೆ. ಸಂಘದ ಎಲ್ಲಾ ವರ್ಗದ ಸದಸ್ಯರಿಗೆ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸುವ, ಸ್ಪರ್ಧಿಸುವ ಮತ್ತು ಮತ ಚಲಾಯಿಸುವ ಅಧಿಕಾರ ಇರುತ್ತದೆ.

6. ಯಾವುದೇ ಸದಸ್ಯರು ಸಂಘದ ಹಿತಕ್ಕೆ ವಿರೋಧವಾಗಿ ವರ್ತಿಸುತ್ತಾರೆಂದು ಕಂಡು ಬಂದಲ್ಲಿ , ಅವರಿಗೆ ಕನಿಷ್ಟ ಪಕ್ಷ 07 ದಿನಗಳ ಅವಧಿಯ ನೋಟೀಸನ್ನು ಕೊಟ್ಟು ಕಾರ್ಯಕಾರಿ ಸಮಿತಿಯು ಅವರ ಸದಸ್ಯತ್ವವನ್ನು ವಜಾ ಮಾಡಬಹುದು. ಅಂತಹ ಸದಸ್ಯರಿಗೆ ಸರ್ವ ಸದಸ್ಯರ ಸಭೆಗೆ ಮೇಲ್ಮನವಿ ಸಲ್ಲಿಸುವ ಅಧಿಕಾರವಿರುತ್ತದೆ.

7. ಸಂಘದ ಸಾಮಾನ್ಯ ಸದಸ್ಯರ ಅವಧಿ ಏಪ್ರಿಲ್ ತಿಂಗಳಿಂದ ಮಾರ್ಚ್ ತಿಂಗಳ ಅಂತ್ಯದವರೆಗೆ ಇರುವುದು. ವರ್ಷದ ನಡುವೆ ಯಾವಾಗ ಸದಸ್ಯರಾದರೂ ಸಹ ಆ ಸದಸ್ಯತ್ವವು ಆ ವರ್ಷಕ್ಕೆ ಸೇರುತ್ತದೆ.

8. ಸದಸ್ಯತ್ವ ನಿಂತು ಹೋಗುವುದು:-

ಮರಣ ಹೊಂದಿದರೆ, ಬುದ್ಧಿ ಭ್ರಮಣೆಯಾದರೆ, ಸದಸ್ಯತ್ವದಿಂದ ವಜಾ ಮಾಡಲ್ಪಟ್ಟರೆ, ರಾಜಿನಾಮೆ ಕೊಟ್ಟರೆ, ಕಾನೂನು ಪ್ರಕಾರ ಅನರ್ಹ ವ್ಯಕ್ತಿಯೆಂದು ಘೋಷಿಸಲ್ಪಟ್ಟಲ್ಲಿ, 3 ತಿಂಗಳ ಅವಧಿಗಿಂತ ಹೆಚ್ಚು ದಿನ ಚಂದಾ ಹಣ ಬಾಕಿ ಇದ್ದರೆ, ಸಂಘದ ಉದ್ದೇಶಗಳಿಗೆ ವಿರುದ್ಧವಾಗಿ ವರ್ತಿಸುತ್ತಿರುವುದು ಕಂಡು ಬಂದರೆ ಅಥವಾ ಸಂಘದ ಹಿತಕ್ಕೆ ದಕ್ಕೆ ಬರುವಂತಹ ಕೆಲಸ ಮಾಡಿದಲ್ಲಿ ಸಂಘದ ಸದಸ್ಯತ್ವ ರದ್ದಾಗುವುದು.

ದಸ್ತಾವೇಜು ಸಂಖ್ಯೆ... 89/11-12 ...ಪುಟ ಸಂಖ್ಯೆ... 08

9. ಸದಸ್ಯರ ಪುಸ್ತಕಃ-

ಸಂಘದಲ್ಲಿ ಸದಸ್ಯರ ಪುಸ್ತಕವನ್ನು ಇಡತಕ್ಕದ್ದು ಅದರಲ್ಲಿ ಸದಸ್ಯರ ಹೆಸರು, ವಿಳಾಸ, ವಯಸ್ಸು, ಉದ್ಯೋಗ, ಮೊದಲಾದ ವಿವರಗಳನ್ನು ನಮೂದಿಸತಕ್ಕದ್ದು. ಖಾತೆ ಪುಸ್ತಕ, ಆಸ್ತಿ ಮತ್ತು ಷೇರುಗಳ ಪುಸ್ತಕಗಳನ್ನು ಇಡತಕ್ಕದ್ದು.

10. ಕಾರ್ಯಕಾರಿ ಸಮಿತಿ ಪದಾಧಿಕಾರಿಗಳ ಆಯ್ಕೆಃ-

ಅ. ಸಂಘದ ಆಡಳಿತವನ್ನೆಲ್ಲ ಈ ಮುಂದಿನಂತೆ ರಚಿತವಾದ ಕಾರ್ಯಕಾರಿ ಸಮಿತಿಯಲ್ಲಿ ಇರತಕ್ಕದ್ದು. ಪ್ರಧಾನ ಕಾರ್ಯದರ್ಶಿ/ ಅಧ್ಯಕ್ಷರು ಸಂಘದ ಪ್ರತಿನಿಧಿಯಾಗಿ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಆ. ಕಾರ್ಯಕಾರಿ ಸಮಿತಿಯ ಸದಸ್ಯರನ್ನು ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಕೈ ಎತ್ತುವುದರ ಮೂಲಕ ಅಥವಾ ಗುಪ್ತ ಮತದಾನದ ಮೂಲಕ ಆರಿಸುವುದು. ಇಂತಹ ಚುನಾಯಿತ ಸದಸ್ಯರು ಮುಂದಿನ ಚುನಾವಣೆಯಲ್ಲಿ ಭಾಗವಹಿಸಬಹುದು.

ಇ. ಕಾರ್ಯಕಾರಿ ಸಮಿತಿಃ-

1) ಒಂದು ವರ್ಷಕ್ಕೊಮ್ಮೆ ಸರ್ವ ಸದಸ್ಯರ ಸಭೆಯಲ್ಲಿ ಒಟ್ಟು 07 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸರ್ವಾನುಮತದಿಂದ ಆರಿಸುವುದು. ಈ ಚುನಾಯಿತ ಸದಸ್ಯರು 08 ದಿನಗಳೊಳಗಾಗಿ ತಮ್ಮಲ್ಲಿಯೇ **ಗೌರವಾಧ್ಯಕ್ಷರು, ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಖಜಾಂಚಿ ಮತ್ತು ಕಾರ್ಯಕಾರಿ** ಸಮಿತಿ ಸದಸ್ಯರನ್ನು ಆರಿಸಿಕೊಳ್ಳುವುದು. ಇನ್ನುಳಿದವರು ಸಾಮಾನ್ಯ ಸದಸ್ಯರಾಗಿ ಮುಂದುವರಿಯುತ್ತಾರೆ.

2) ಚುನಾವಣಾಧಿಕಾರಿಯಾಗಿ ಹಿರಿಯ ಸದಸ್ಯರನ್ನೊಬ್ಬರನ್ನು ಅಥವಾ ಹೊರಹೋಗುತ್ತಿರುವ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಿಸಿದ ಮತ್ತು ಕಾನೂನಿನ ಬಗ್ಗೆ ತಿಳುವಳಿಕೆ ಇರುವ ವ್ಯಕ್ತಿಯನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸಿಕೊಳ್ಳಬಹುದು.

3) ಚುನಾವಣೆಯ 3 ತಿಂಗಳ ಮೊದಲು ಸುಸ್ತಿ ಸದಸ್ಯರ ಪಟ್ಟಿಯನ್ನು ಸಂಘದ ಪ್ರಧಾನ ಕಾರ್ಯದರ್ಶಿಗಳು ಪ್ರಕಟಿಸಬೇಕು ಮತ್ತು ಸದರಿ ದಿನಾಂಕದಿಂದ ಒಂದು ತಿಂಗಳೊಳಗಾಗಿ ಸುಸ್ತಿ ಹಣ ಪಾವತಿಸಬೇಕು. ಅವಧಿ ಮುಗಿದ ಒಂದು ವಾರದೊಳಗಾಗಿ ಅರ್ಹ ಮತದಾರ ಪಟ್ಟಿಯನ್ನು ಪ್ರಕಟಿಸಬೇಕು ಮತ್ತು ಈ ಬಗ್ಗೆ ಸಂಘದ ಎಲ್ಲಾ ಸದಸ್ಯರಿಗೆ ತಿಳುವಳಿಕೆ ನೀಡಬೇಕು.

4) ಕಾರ್ಯಕಾರಿ ಸಮಿತಿಯ ಅವಧಿಯ ಮುಗಿಯುವ 4 ತಿಂಗಳು ಮೊದಲೇ ಚುನಾವಣೆ ದಿನಾಂಕ ನಿಗಧಿಪಡಿಸಿ, ಸಂಘಗಳ ನೋಂದಣಾಧಿಕಾರಿಗಳಿಗೆ ದಿನಾಂಕ ತಿಳಿಸಬೇಕು.

5) ಚುನಾವಣೆಯ ದಿನಾಂಕ್ಕಿಂತ ಮೂರು ತಿಂಗಳು ಮೊದಲು ಯಾವುದೇ ವ್ಯಕ್ತಿಯನ್ನು ಸಂಘಕ್ಕೆ ಸದಸ್ಯರನ್ನಾಗಿ ಮಾಡಿಕೊಳ್ಳತಕ್ಕದ್ದಲ್ಲ.

6) ಆಯ್ಕೆಯಾದ ಕಾರ್ಯಕಾರಿ ಸಮಿತಿಯ ಅವಿಧಯ ಕೊನೆಯ ದಿನದ ಮದ್ಯಾಹ್ನ ಅಥವಾ ಅವಧಿಯ ಮೊದಲದ ದಿನದ ಪೂರ್ವಾಹ್ನದಂದು ಅಧಿಕಾರ ವಹಿಸಿಕೊಳ್ಳಬೇಕು.

ಈ. ಕಾರ್ಯಕಾರಿ ಸಮಿತಿಯಲ್ಲಿ ಯಾವುದೇ ಸ್ಥಾನ ತೆರವಾದರೆ ಆ ಸ್ಥಾನಕ್ಕೆ ಸದಸ್ಯರಲ್ಲಿ ಬೇರೆ ಯಾರನ್ನಾದರೂ ಸದಸ್ಯರ ಬಹುಮತ ನಿರ್ಣಯದ ಮೇರೆಗೆ ನಿಯಮಿಸಿಕೊಳ್ಳಬಹುದು.

ಉ. ಕಾರ್ಯಕಾರಿ ಸಮಿತಿಯ ಸಾಮಾನ್ಯ ಸಭೆಯನ್ನು ಕುರಿತು ತಿಳುವಳಿಕೆ ಪತ್ರಗಳನ್ನು 07 ದಿನಗಳಿಗೆ ಕಡಿಮೆ ಇಲ್ಲದಂತೆ ಮುಂಚಿತವಾಗಿ ಸದಸ್ಯರಿಗೆ ಕಳುಹಿಸತಕ್ಕದ್ದು ಹಾಗೂ ಪ್ರತಿ ಮೂರು ತಿಂಗಳಿಗೊಮ್ಮೆ ಕಾರ್ಯಕಾರಿ ಸಮಿತಿ ಸದಸ್ಯರ ಸಭೆಯನ್ನು ನಡೆಸುವುದು.

ಊ. ಜರೂರು ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿಯು ಸಭೆ ಸೇರುವ ಸಮಯವನ್ನು ಇಷ್ಟು ಮುಂಚಿತವಾಗಿ ಸದಸ್ಯರಿಗೆ ತಿಳಿಯಪಡಿಸಬೇಕೆಂಬ ಕಾಲ ವ್ಯವದಾನದ ನಿರ್ಬಂಧವಿಲ್ಲ. ಸಮಿತಿಗೆ ಆ ಸಂದರ್ಭವನ್ನು ನಿರ್ಧರಿಸುವ ಅಧಿಕಾರ ಇರುವುದು.

ಖು. ಕಾರ್ಯಕಾರಿ ಸಮಿತಿಯು ಸಂಘದ ಉದ್ದೇಶಗಳ ಈಡೇರಿಕೆಗಾಗಿ ಸದಸ್ಯರಿಂದ, ದಾನಿಗಳಿಂದ, ಹಣಕಾಸು, ಖಾಸಗಿ, ಸರ್ಕಾರಿ, ಸರ್ಕಾರೇತರ ಸಂಸ್ಥೆಗಳಿಂದ, ಬ್ಯಾಂಕುಗಳಿಂದ ನೆರವು, ಧನಸಹಾಯ, ಕೊಡುಗೆ, ಚಂದಾ, ದೇಣಿಗೆ, ಅನುದಾನ ಇತ್ಯಾದಿಗಳನ್ನು ಸ್ವೀಕರಿಸುವ ಅಧಿಕಾರ ಇರುವುದು. ಸಂಘದ ಉದ್ದೇಶಗಳ ಈಡೇರಿಕೆಗಾಗಿ ಮತ್ತು ಉಪಯೋಗಕ್ಕಾಗಿ ನಿವೇಶನ ಮತ್ತು ಕಟ್ಟಡಗಳನ್ನು ಸಂಘದ ಹೆಸರಿನಲ್ಲಿ ಕ್ರಯಕ್ಕೆ ಕೊಳ್ಳಬಹುದಾಗಿರುತ್ತದೆ.

ಖೂ. ನಿರ್ವೇದನಾ ಪತ್ರಿಕೆಯಲ್ಲಿ ಸಹಿ ಮಾಡಿರುವ ಸದಸ್ಯರುಗಳು ಕಾರ್ಯಕಾರಿ ಸಮಿತಿಯ ಪ್ರಥಮ ಸದಸ್ಯರಾಗಿರುತ್ತಾರೆ. ಮುಂದಿನ ಸಾಲಿಗೆ ಸದಸ್ಯರು ಆರಿಸಲ್ಪಡುವವರೆವಿಗೂ ಅವರು ಮುಂದುವರೆಯುತ್ತಾರೆ.

ಎ. ಯಾವುದೇ ಸದಸ್ಯರು ಸಂಘದ ಕಾರ್ಯಕಾರಿ ಸಮಿತಿಯ ಚುನಾವಣೆಯಲ್ಲಿ ಸ್ಪರ್ಧಿಸಬೇಕಾದಲ್ಲಿ ಸಂಘದ ಸದಸ್ಯರಾಗಿ ಕನಿಷ್ಠ ಪಕ್ಷ ಒಂದು ವರ್ಷಗಳ ಕಾಲಾವಧಿ ಆಗಿರಬೇಕು.

ಏ. ಕಾರ್ಯಕಾರಿ ಸಮಿತಿ ಆಡಳಿತಾವಧಿಯ ಕೊನೆಯ ಮೂರು ತಿಂಗಳಲ್ಲಿ ಯಾವುದೇ ವಿಧವಾದ ಹೊಸ ಸದಸ್ಯತ್ವವನ್ನು ನೀಡತಕ್ಕದ್ದಲ್ಲ.

ಐ. ಅವಶ್ಯಕತೆ ಕಂಡಾಗ ಕಾರ್ಯಕಾರಿ ಸಮಿತಿ ಸಂಘದ ವಿವಿಧ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುವುದಕ್ಕಾಗಿ ತಮ್ಮಲ್ಲಿಯೇ ಆಗಲೀ ಅಥವಾ ಇತರೆ ಸದಸ್ಯರಿಂದಲೇ ಆಗಲೀ ಕೂಡಿದ ಉಪ ಸಮಿತಿಗಳನ್ನು ರಚಿಸಬಹುದು.

ಜೆ. ಕನಿಷ್ಠ ಪಕ್ಷ ಪ್ರತಿ 3 ತಿಂಗಳಿಗೊಮ್ಮೆ ಕಾರ್ಯಕಾರಿ ಸಮಿತಿ ಸಭೆ ನಡೆಸತಕ್ಕದ್ದು.

ಕೆ) ಸಂಘದ ಧ್ಯೇಯೋದ್ದೇಶಗಳನ್ನು ಈಡೇರಿಸಲು ಅಗತ್ಯ ಯೋಜನೆಗಳನ್ನು ರೂಪಿಸಿಕೊಳ್ಳುವುದು.

ಎಲ್) ಕಾರ್ಯಕಾರಿ ಸಮಿತಿ ಸಭೆಯಲ್ಲಿ ತಪ್ಪದೆ ಈ ಹಿಂದಿನ ಮಾಹೆಗಳ ಜಮಾ-ಖರ್ಚು ಅನುಮೋದನೆಯನ್ನು ಕಡ್ಡಾಯವಾಗಿ ಪಡೆಯಬೇಕು.

ಎಂ) ಸಂಘದ ಯಾವುದೇ ಹಣಕಾಸಿನ ಲೇವಣಿ, ಖರ್ಚು ಇತ್ಯಾದಿಗಳ ಬಗ್ಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಪಡೆಯದ ಹೊರತು ವಿನಿಯೋಗಿಸುವುದಾಗಲೀ ಅಥವಾ ಖರ್ಚು ಮಾಡತಕ್ಕದ್ದಲ್ಲ.

11. ಅವಶ್ಯಕ ಸಂಖ್ಯೆ:-

ಅ. ಕಾರ್ಯಕಾರಿ ಸಮಿತಿ ಸಭೆಗೆ ಕಾರ್ಯ ನಿರ್ವಹಣಾಧಿಕಾರವಿರುವುದಕ್ಕೆ ಒಟ್ಟು 1/3 ರಷ್ಟು ಸದಸ್ಯರಾದರೂ ಹಾಜರಿರಬೇಕು. ಅವಶ್ಯ ಸಂಖ್ಯೆಯಷ್ಟು ಸದಸ್ಯರು ಹಾಜರಾಗದಿದ್ದರೆ ಆ ಸಭೆಯನ್ನು ಮುಂದೆ ಒಂದು ದಿನಕ್ಕೆ ಮುಂದೂಡಬೇಕು. ಮುಂದಿನ ದಿವಸ ಅವಶ್ಯ ಸಂಖ್ಯೆಯಷ್ಟು ಸದಸ್ಯರು ಹಾಜರಾತಿ ಇರಲಿ, ಇಲ್ಲದಿರಲಿ ಹಿಂದಿನ ಸಭೆಗೆ ಗೊತ್ತಾಗಿದ್ದ ಕಾರ್ಯ ವಿವರಗಳನ್ನು ಪರ್ಯಾಲೋಚಿಸಿ ತೀರ್ಮಾನಗಳನ್ನು ಕೈಗೊಳ್ಳಲು ಅಧಿಕಾರ ಇರುತ್ತದೆ.

ಆ. ಕಾರ್ಯಕಾರಿ ಸಮಿತಿಯ ಯಾವ ಒಬ್ಬ ಸದಸ್ಯರೂ ಅಧ್ಯಕ್ಷರ ಗಮನಕ್ಕೆ ತರದೆ 3 ಸಭೆಗೆ (ಮುಂದೂಡಲ್ಪಟ್ಟ ಸಭೆಯು ಸೇರಿ) ಸತತವಾಗಿ ಗೈರುಹಾಜರಾದಲ್ಲಿ ಅಂತಹವರನ್ನು ಕಾರ್ಯಕಾರಿ ಸಮಿತಿಯ ಸದಸ್ಯತ್ವದಿಂದ ತೆಗೆಯಬಹುದು ಮತ್ತು ತೆರವಾದ ಸ್ಥಾನಕ್ಕೆ ನಿಬಂಧನೆ 8ಇ ಪ್ರಕಾರ ನಿಯಮಿಸಿಕೊಳ್ಳಬಹುದು.

12. ಲೆಕ್ಕಪತ್ರಗಳು ಮತ್ತು ಹಣಕಾಸು (ಆಡಳಿತ) ವರ್ಷ:-

ಅ. ಸಂಘದ ಆಡಳಿತ ಮತ್ತು ಹಣಕಾಸು ವರ್ಷವು ಏಪ್ರಿಲ್ 01 ರಿಂದ ಮಾರ್ಚ್ 31 ಇರುತ್ತದೆ.

ಆ. ಕಾರ್ಯಕಾರಿ ಸಮಿತಿಯು ಒಬ್ಬ ಲೆಕ್ಕ ತಪಾಸಣಾಧಿಕಾರಿಯನ್ನು ನೇಮಿಸುವುದು. ಅಂತಹವರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿರಬಾರದು.

ಇ. ಲೆಕ್ಕಪತ್ರಗಳನ್ನು ಲೆಕ್ಕ ತಪಾಸಣಾಧಿಕಾರಿಯನ್ನು ನೇಮಕ ಮಾಡಿ, ಸಂಘದ ಆಸ್ತಿ ಮತ್ತು ಜವಾಬ್ದಾರಿ ತಃಖ್ತೆಗಳನ್ನು ಪರಿಶೀಲಿಸಿ ಲೆಕ್ಕಪತ್ರಗಳನ್ನು ತಯಾರಿಸುವುದು ಮತ್ತು ಅದನ್ನು ವಾರ್ಷಿಕ ಸಭೆಗೆ ಒಪ್ಪಿಸುವುದು.

ಈ. ಸಂಘದ ಲೆಕ್ಕ ಪತ್ರಗಳ ಬಗ್ಗೆ ವಿವರಣೆಯೇನಾದರೂ ಬೇಕಾದಲ್ಲಿ ಸದಸ್ಯರಲ್ಲಿ ಯಾರೇ ಆಗಲಿ ಅಧ್ಯಕ್ಷರು ಅಥವಾ ಪ್ರಧಾನ ಕಾರ್ಯದರ್ಶಿಯವರ ಮೂಲಕ ಪಡೆಯಬಹುದು.

ಉ. ಸಂಘದ ಹೆಸರಿನಲ್ಲಿ ಯಾವುದಾದರೂ ಒಂದು ರಾಷ್ಟ್ರೀಕೃತ/ಕೋ-ಆಪರೇಟೀವ್ (ಸಹಕಾರ ಸಂಘದ) ಬ್ಯಾಂಕಿನಲ್ಲಿ ಒಂದು ಖಾತೆಯನ್ನು ತೆರೆದು ಆ ಖಾತೆಯಲ್ಲಿ ಸಂಘದ ಹಣವನ್ನು ಜಮಾ ಮಾಡಿ ಸಂಘದ ಕಾರ್ಯಕ್ರಮಗಳಿಗೆ ಹಣ ಬೇಕಾದಾಗ ಸಂಘದ ಪ್ರಧಾನ ಕಾರ್ಯದರ್ಶಿ ಮತ್ತು ಖಜಾಂಚಿ ಅವರುಗಳ ಜಂಟಿ ಸಹಿಯೊಡನೆ ಹಣವನ್ನು ಪಡೆಯಬಹುದು.

13. ನಿಬಂಧನೆಗಳ ತಿದ್ದುಪಡಿ:-

ನಿಬಂಧನೆಗಳಾಗಲೀ ಅಥವಾ ಉಪ ನಿಬಂಧನೆಗಳಾಗಲೀ ಇವುಗಳಿಗೆ ಸೇರಿಸಿಕೊಳ್ಳುವ ಅಥವಾ ಬದಲಾಯಿಸುವ ಅಧಿಕಾರವು ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಭಾಗದಷ್ಟು ಸದಸ್ಯರು ಒಪ್ಪಿಗೆ ಕೊಟ್ಟಾಗ ಅಂತಹವುಗಳನ್ನು ತಿದ್ದುಪಡಿ ಮಾಡಬಹುದು ಮತ್ತು ಸಂಘದ ನೋಂದಣಾಧಿಕಾರಿ ಒಪ್ಪಿಗೆಯ ನಂತರ ಅಳವಡಿಸಿಕೊಳ್ಳಬಹುದು.

14. ಕಾರ್ಯಾವಧಿ:-

ಸಂಘದ ಕಾರ್ಯಾವಧಿಯು ಬೆಳಿಗ್ಗೆ 09.00 ರಿಂದ ರಾತ್ರಿ 06.00 ಗಂಟೆಯವರೆಗೆ ಇರುತ್ತದೆ.

15. ಸದಸ್ಯರ ಸೂಚನೆಗೆ ಕಾಲಮಿತಿ:-

ಅ. ಸಂಘದ ಕಾರ್ಯಕಲಾಪಗಳ ಬಗ್ಗೆ ಸೂಚನೆಗಳನ್ನು ಮತ್ತು ಅಂಗರಚನೆಯ ಬಗ್ಗೆ ಸೂಚನೆಗಳನ್ನು ತಿದ್ದುಪಡಿಸಿ ಸೂಚಿಸುವ ಸದಸ್ಯರು ವಾರ್ಷಿಕ ಸಭೆ ಗೊತ್ತಾಗಿರುವ ದಿವಸಕ್ಕೆ ಕನಿಷ್ಟ ಪಕ್ಷ 10 ದಿನಗಳ ಮೊದಲು ನೋಟೀಸನ್ನು ಸಂಘದ ಕಾರ್ಯಾಲಯಕ್ಕೆ ಕಳುಹಿಸತಕ್ಕದ್ದು.

ಆ. ಮುಂದಿನ ವರ್ಷ ಆಯ-ವ್ಯಯ ಅಂದಾಜು ಪಟ್ಟಿಯ ವ್ಯವಸ್ಥೆ ಕಾರ್ಯಕಾರಿ ಸಮಿತಿಯ ಸೂಚನೆಗಳನ್ನು ತಯಾರಿಸುವುದು.

ಇ. ನಿಬಂಧನೆಯ 8ಆ ಪ್ರಕಾರ ವಾರ್ಷಿಕ ಸಭೆಯಲ್ಲಿ ಚುನಾಯಿಸಿದ ಮತಗಳನ್ನು ಎಣಿಸಿ ಫಲಿತಾಂಶಗಳನ್ನು ಪ್ರಕಟಿಸತಕ್ಕದ್ದು.

16. ಸರ್ವ ಸದಸ್ಯರ ಸಭೆ ನಿರ್ದಿಷ್ಟ ಸಂಖ್ಯೆ:-

ಪ್ರತಿಯೊಂದು ಸರ್ವ ಸದಸ್ಯರ ಸಭೆಯಲ್ಲಿ 1/3 ಭಾಗದಷ್ಟು ಸದಸ್ಯರಿಗೆ ಕಡಿಮೆ ಇಲ್ಲದೆ ಹಾಜರಿರಬೇಕು. ಯಾವ ಸಭೆಯಲ್ಲಿಯೇ ಆಗಲೀ ಕ್ಲುಪ್ತ ಕಾಲದ ನಂತರ ಅರ್ಧ ಗಂಟೆಯೊಳಗಾಗಿ ಈ ಅವಶ್ಯ ಸಂಖ್ಯೆಯಷ್ಟು ಸದಸ್ಯರು ಹಾಜರಾಗದಿದ್ದರೆ ಆ ಸಭೆಯನ್ನು ಮುಂದಕ್ಕೆ ಹಾಕತಕ್ಕದ್ದು. ಮುಂದಕ್ಕೆ ಹಾಕಿದ ಸಭೆಯ ದಿನ, ಕಾಲ, ವೇಳೆ ಇವುಗಳನ್ನು ಅಧ್ಯಕ್ಷರು ನಿಶ್ಚಯಿಸಿ ತಕ್ಷಣವೇ ತಿಳಿಸತಕ್ಕದ್ದು. ಈ ರೀತಿ ಮುಂದುವರಿದ ಸಭೆಯಲ್ಲಿ ಅವಶ್ಯಕವಾದ ಕೋರಂ ಇಲ್ಲದೆ ಇದ್ದರೂ ಸಭೆಯನ್ನು ನಡೆಸತಕ್ಕದ್ದು. ಮುಂದಿನ ಸಭೆಯಲ್ಲಿ ಹೊಸ ವಿಷಯ ಯಾವುದನ್ನು ಚರ್ಚೆಗೆ ತರತಕ್ಕದ್ದಲ್ಲ.

17. ಸರ್ವ ಸದಸ್ಯರ ಸಭೆ:-

ಅ. ಸರ್ವ ಸದಸ್ಯರ ಸಭೆಯನ್ನು ಹಣಕಾಸು ವರ್ಷದ ಅವಧಿ ಮುಗಿದ 03 ತಿಂಗಳೊಳಗಾಗಿ ಅಂದರೆ ಪ್ರತಿ ವರ್ಷ ಜೂನ್ ತಿಂಗಳೊಳಗಾಗಿ ನಡೆಸತಕ್ಕದ್ದು. ಸದಸ್ಯರಿಗೆಲ್ಲಾ ತಿಳುವಳಿಕೆ ಪತ್ರಗಳನ್ನು ಸಭೆ ಸೇರುವುದಕ್ಕೆ 21 ದಿವಸ ಮುಂಚಿತವಾಗಿ ಕಳುಹಿಸತಕ್ಕದ್ದು.

ಆ. ಹಿಂದಿನ ವರ್ಷದ ಆದಾಯ ವೆಚ್ಚ ಪಟ್ಟಿಯನ್ನು ಚಾರ್ಟರ್ಡ್ ಅಕೌಂಟೆಂಟರಿಂದ ತಯಾರು ಮಾಡಿರುವುದನ್ನು ಸಭೆ ಚರ್ಚಿಸಿ ಅನುಮೋದಿಸುವುದು. ಸಂಘವು ಆ ವರ್ಷದಲ್ಲಿ ಸಾಧಿಸಿರುವ ಪ್ರಗತಿಯಮ್ನ ಅವಲೋಕಿಸುವುದು.

ಇ. ಒಂದು ವರ್ಷಕ್ಕೊಮ್ಮೆ ಸರ್ವ ಸದಸ್ಯರ ಸಭೆಯಲ್ಲಿ 07 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆರಿಸುವುದು. ಮುಂದಿನ ವರ್ಷದ ಅಯ್ಯ-ವ್ಯಯದ ಬಜೆಟನ್ನು ಮಂಡಿಸುವುದು.

18. ಸದಸ್ಯರು ಮತ ಚಲಾಯಿಸುವ ಮತ್ತು ಅಭ್ಯರ್ಥಿಯಾಗುವ ಅಧಿಕಾರ :-

ಸರ್ವ ಸದಸ್ಯರ ಸಭೆಯಲ್ಲಿ ಮತ್ತು ಕಾರ್ಯಕಾರಿ ಸಮಿತಿಯ ಚುನಾವಣೆಯಲ್ಲಿ ಭಾಗವಹಿಸುವ ಅಧಿಕಾರವು ತಮ್ಮ ಚಂದಾ ಹಣವನ್ನು ಪೂರ್ತಿಯಾಗಿ ಸಲ್ಲಿಸಿ ಮತದಾರರ ಪಟ್ಟಿಯಲ್ಲಿ ಹೆಸರುಳ್ಳ ಸದಸ್ಯರಿಗೆ ಮಾತ್ರ ಇರತಕ್ಕದ್ದು.

19. ಎಲ್ಲಾ ತೀರ್ಮಾನಗಳು ಸಭೆಯಲ್ಲಿರುವ ಸದಸ್ಯರ ಬಹುಮತ ನಿರ್ಣಯದ ಮೇರೆಗೆ ಆಗತಕ್ಕದ್ದು. ಅದರ ಅಂಗರಚನೆಯ ತಿದ್ದುಪಡಿಗಳನ್ನು ಮಾಡುವ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿರುವ ಸದಸ್ಯರ [illegible] ಇಲ್ಲದಷ್ಟು ಬಹುಮತವಿರಬೇಕು.

20. ವಿಶೇಷ ಸಭೆ:-

ಕಾರ್ಯಕಾರಿ ಸಮಿತಿಗೆ ಅವಶ್ಯವೆಂದು ಕಂಡು ಬಂದಾಗ ಅಥವಾ ಮತ ಕೊಡುವ ಹಕ್ಕುಳ್ಳ ಸದಸ್ಯರ ಸಂಖ್ಯೆ 1/3 ರಷ್ಟು ಸದಸ್ಯರು ಬರಹದ ಮೂಲಕ ಅಪೇಕ್ಷಿಸಿದಾಗ ಅಥವಾ ಸಂಘಗಳ ನೋಂದಣಾಧಿಕಾರಿಗಳ ಆಜ್ಞೆಯ ಮೇರೆಗೆ ಅಕ್ಷೇಪಣೆ ಪತ್ರ ಬಂದ 30 ದಿನಗಳೊಳಗಾಗಿ ವಿಶೇಷ ಸರ್ವಸದಸ್ಯರ ಸಭೆ ಕರೆಯಬೇಕು. ಕನಿಷ್ಠ ಪಕ್ಷ 21 ದಿನಗಳ ನೋಟೀಸನ್ನು ಎಲ್ಲಾ ಸದಸ್ಯರಿಗೂ ಕಳುಹಿಸತಕ್ಕದ್ದು. ನೋಟೀಸಿನಲ್ಲಿ ಸಭೆ ಸೇರತಕ್ಕ ಸ್ಥಳ, ದಿನಾಂಕ, ವೇಳೆ ಮತ್ತು ಚರ್ಚಿಸತಕ್ಕ ವಿಷಯಗಳನ್ನು ನಮೂದಿಸತಕ್ಕದ್ದು. ಯಾರಿಗಾದರೂ ನೋಟೀಸು ತಲುಪಿಲ್ಲ ಎಂಬ ಒಂದೇ ಕಾರಣದಿಂದ ಸಭೆಯ ಕಾರ್ಯಕಲಾಪಗಳು ಅಸಿಂಧುವಾಗಲಾರವು.

21. ಸಾಲಾಖೈರು ಆದ ಕೂಡಲೇ ವಾರ್ಷಿಕ ಲೆಕ್ಕಪತ್ರಗಳನ್ನು ಅಧ್ಯಕ್ಷರು /ಕಾರ್ಯದರ್ಶಿ ತಯಾರಿಸಿಕೊಂಡು 1960ರ ಕಂಪನಿಗಳ ಕಾಯಿದೆಯ 296ನೇ ವಿಧಿಗಳನ್ವಯ ಅಧಿಕಾರ ಪಡೆದ ಆಡಿಟರ್ ರವರಿಂದ ಆಡಿಟ್ ಮಾಡಿಸಿಕೊಂಡು ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಬೇಕು.

22. ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960ರ ಸೆಕ್ಷನ್ 13 ರನ್ವಯ ವಾರ್ಷಿಕ ಸಭೆಯ ಅನುಮತಿಯನ್ನು ಪಡೆದ 14 ದಿನಗಳೊಳಗಾಗಿ ಕಾರ್ಯಕಾರಿ ಸಮಿತಿಯ ಸದಸ್ಯರ ಪಟ್ಟಿಯನ್ನು ವಾರ್ಷಿಕ ಲೆಕ್ಕಪತ್ರಗಳನ್ನು ನೋಂದಣಾಧಿಕಾರಿಯವರಿಗೆ ಕಳುಹಿಸತಕ್ಕದ್ದು.

23. ತಿದ್ದುಪಡಿ:-

1960 ರ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯ 9 ಮತ್ತು 10 ರ ವಿಧಿಗಳನ್ವಯ ಕ್ರಮ ಕೈಗೊಂಡು ನಿವೇದನಾ ಪತ್ರಿಕೆ ಮತ್ತು ನಿಬಂದನೆಗಳನ್ನು ಅವಶ್ಯವೆನಿಸಿದರೆ ಬದಲಾಯಿಸಹುದು. ಇಂತಹ ತಿದ್ದುಪಡಿಯು ನೋಂದಣಾಧಿಕಾರಿಯವರಿಂದ ಅನುಮತಿ ಪಡೆದ ಮೇಲೆ ಜಾರಿಯಲ್ಲಿ ಬರುತ್ತದೆ.

24. ವಿಸರ್ಜನೆ:-

ಸಂಘವನ್ನು 1960ರ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯ 22 ಮತ್ತು 23ನೇ ವಿಧಿಗಳನ್ವಯ ಕ್ರಮ ಕೈಗೊಂಡು ವಿಸರ್ಜಿಸಬಹುದು.

25. ಸಂಯೋಜನೆ:-

1960ರ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆಯ 21ನೇ ವಿಧಿಗಳನ್ವಯ ಕ್ರಮ ಕೈಗೊಂಡು ಬೇರಾವುದೇ ನೋಂದಣಿಯಾಗಿರುವ ಸಂಸ್ಥೆಯಲ್ಲಿ ಕೂಡಿಕೊಳ್ಳಬಹುದು.

26. ಸಂಘದ ಧ್ಯೇಯೋದ್ದೇಶಗಳ ನಿರ್ವಹಣೆಗಾಗಿ ರಾಜ್ಯ ಸರ್ಕಾರದಿಂದಾಗಲಿ, ಕೇಂದ್ರ ಸರ್ಕಾರದಿಂದಾಗಲಿ, ಇನ್ನಿತರೆ ಸಂಘ ಸಂಸ್ಥೆಗಳಿಂದಾಗಲಿ, ಅನುದಾನ ಸ್ವೀಕರಿಸಬಹುದು ಹಾಗೂ ಯಾವುದೇ ಹಣಕಾಸು ಸಂಸ್ಥೆಗಳಿಂದ, ರಾಷ್ಟ್ರೀಕೃತ, ಸಹಕಾರಿ, ಷಡ್ಯೂಲ್ಡ್ ಬ್ಯಾಂಕುಗಳಿಂದಾಗಲಿ ಮಹಿಳಾ ಕೋಷ ಸಂಸ್ಥೆಯಿಂದಾಗಲಿ ಸಾಲ ಸೌಲಭ್ಯಗಳನ್ನು ಪಡೆಯಬಹುದಾಗಿರುತ್ತದೆ.

27. ಬಂಡವಾಳ ಹೂಡಿಕೆ:

ಸಂಸ್ಥೆಯ ನಿಧಿಯನ್ನು ಅದಾಯ ತೆರಿಗೆ ವಿದಿ 13(1)(ಡಿ)rws 11(5) ಆದಾಯ ತೆರಿಗೆ 1961ರಂತೆ ಹೂಡಲಾಗುವುದು ಹಾಗೂ ಈ ಕಾಯಿದೆಗೆ ಕಾಲ ಕಾಲಕ್ಕೆ ಬರುವ ತಿದ್ದುಪಡಿಯಂತೆ ಮಾಡಲಾಗುವುದು.

28. ಸಂಘದ ಲೆಕ್ಕಪತ್ರ:

ಸಂಸ್ಥೆಯ ಎಲ್ಲಾ ಲೆಕ್ಕಪತ್ರಗಳನ್ನು ನಿಯಮಿತವಾಗಿ ಇಡಬೇಕು, ಲೆಕ್ಕಗಳನ್ನು ಅರ್ಹ ಅಡಿಟ್ ರವರಿಂದ ಪ್ರತಿ ವರ್ಷ ಅಡಿಟ್ ಮಾಡಿಸಬೇಕು. ಲೆಕ್ಕಗಳನ್ನು ಪ್ರತಿವರ್ಷ ಮಾರ್ಚ್ 31ರ ಒಳಗೆ ಮುಕ್ತಾಯಗೊಳಿಸಬೇಕು.

29. ತಿದ್ದುಪಡಿಗಳು:

ಆದಾಯ ತೆರಿಗೆ ಕಾಯಿದೆ 1961ರ ವಿಧಿ 2(15), 11, 12 ಮತ್ತು 80(ಜಿ) ಅವಕಾಶಗಳಿಗೆ ವಿರುದ್ಧವಾಗಿ ಯಾವುದೇ ತಿದ್ದುಪಡಿಗಳು ಸಂಸ್ಥೆಯ ಮೇಮೊರಾಂಡಮ್ ಆಫ್ ಅಸೋಸಿಯೇಷನ್, ಬೈಲಾ, ನಿಯಮ ನಿಬಂಧನೆಗಳಿಗೆ ಮಾಡಬಾರದು, ಕಾಲ ಕಾಲಕ್ಕೆ ಆಗುವ ತಿದ್ದುಪಡಿಗಳನ್ನು ಪಾಲಿಸುವುದು. ಯಾವುದೇ ತಿದ್ದುಪಡಿಗಳನ್ನು ಆದಾಯ ತೆರೆಗೆ ಆಯುಕ್ತರ ಪೂರ್ವಾನುಮತಿಯಿಲ್ಲದೇ ಮಾಡಬಾರದು.

30. ವಿಘಟನೆ, ವಿಸರ್ಜನೆಃ
ಸಂಸ್ಥೆಯನ್ನು ಒಂದು ವೇಳೆ ಮುಚ್ಚುವುದು ಅಥವಾ ವಿಸರ್ಜನೆ ಮಾಡಬೇಕಾದರೆ ಸಂಸ್ಥೆಯ ಆಸ್ತಿ, ಸ್ವತ್ತುಗಳನ್ನು ಯಾವುದೇ ಕಾರಣದಿಂದ ಕಾರ್ಯಕರಿ ಸಮಿತಿಯ ಸದಸ್ಯರಾಗಲೀ ಅಥವಾ ಯಾರಿಗೆ ಆಗಲಿ ವಿತರಿಸತಕ್ಕದ್ದಲ್ಲ, ಆದರೆ ಅಂತಹುದೇ ಉದ್ದೇಶವುಳ್ಳ ಯಾವುದೇ ಸಂಸ್ಥೆಯು 80(ಜಿ) ಅದಾಯ ತೆರಿಗೆ ಕಾಯಿದೆ 1961ರ ಪ್ರಕಾರ ಹೊಂದಿದಲ್ಲಿ, ಅಂತಹ ಸಂಸ್ಥೆಗೆ ಹಸ್ತಾಂತರಿಸುವುದು, ಇವು ಕಾಲ ಕಾಲಕ್ಕೆ ಆಗುವ ಬದಲಾವಣೆಗಳಿಗೆ ಒಳಪಟ್ಟಿರುತ್ತವೆ.

31. ಫಲಾನುಭವಿಗಳುಃ
ಸಂಘದ ಸೌಲಭ್ಯಗಳು ನಿಯಾಮವಳಿಗೊಳಪಟ್ಟು ಧರ್ಮ, ಜಾತಿ, ಮತ ಭೇದವಿಲ್ಲದೆ ಎಲ್ಲರಿಗೂ ದೊರೆಯತಕ್ಕದ್ದು.

32. ಹಣ ವಿನಿಯೋಗ ಬಳಸುವಿಕೆಃ
ಸಂಸ್ಥೆಯ ಹಣ ಮತ್ತು ಆದಾಯಗಳನ್ನು ಸಂಸ್ಥೆಯ ಉದ್ದೇಶಗಳಿಗೆ ಮಾತ್ರ ವಿನಿಯೋಗಿಸತಕ್ಕದ್ದು, ಯಾವುದೇ ಕಾರಣಕ್ಕೆ ಸಂಸ್ಥೆಯ ಸದಸ್ಯರ ವೇತನಕ್ಕಾಗಲೀ, ಆದಾಯ ಬಡ್ಡಿ ಭಾಗ ಮುಂತಾದವುಗಳಿಗೆ ಕೊಡಬಾರದು.

33.ಪದಾಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳುः-

ಅಧ್ಯಕ್ಷರು ः-
ಸಂಘಕ್ಕೆ ಸಂಬಂದಪಟ್ಟ ಎಲ್ಲಾ ಸಭೆಗಳನ್ನು ನಡೆಸುವುದು ಕಾರ್ಯಕಾರಿ ಸಮಿತಿಯ ಸಭೆಯನ್ನು ನಡೆಸವುದು. ಸಂಘಕ್ಕೆ ಸಂಬಂದಪಟ್ಟ ವ್ಯವಹಾರಗಳಲ್ಲಿ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯನ್ನು ನಡೆಸುವುದು ನಿರ್ಣಾಯಕ ಮತವನ್ನು ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. ವಿಶೇಷ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿ ಸಭೆಯನ್ನು ಕರೆಯುವ ಅಧಿಕಾರ ಇರುವುದು.

ಉಪಾಧ್ಯಕ್ಷರುः-
ಅಧ್ಯಕ್ಷರವರ ಸಂಘದ ಕೆಲಸಗಳಲ್ಲಿ ನೆರವಾಗುವುದು ಮತ್ತು ಅವರ ಗೈರು ಹಾಜರಿಯಲ್ಲಿ ಆ ದಿನದ ಕರ್ತವ್ಯ ನಿರ್ವಹಿಸುವುದು.

ಪ್ರಧಾನ ಕಾರ್ಯದರ್ಶಿಃ -
ಪ್ರಧಾನ ಕಾರ್ಯದರ್ಶಿಯವರು ಕಾರ್ಯಕಾರಿ ಸಮಿತಿಯ ವಾರ್ಷಿಕ ಮಹಾಸಭೆ ಮತ್ತು ಸದಸ್ಯರ ಇತರೆ ಸಭೆಗಳನ್ನು ಏರ್ಪಡಿಸುವುದು. ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನವಾದಂತಹ ವಿಷಯಗಳಲ್ಲಿ ಖಾಸಗಿ, ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳು ಮತ್ತು ಸಂಬಂದಪಟ್ಟ ಇಲಾಖೆಗಳೊಡನೆ ವ್ಯವಹರಿಸುವುದು. ಸಭೆಯ ನಡವಳಿಕೆಯನ್ನು ಬರೆಯುವುದು, ಲೆಕ್ಕಪತ್ರಗಳನ್ನು ಬರೆಯುವುದು. ಸಂಘದ ಸದಸ್ಯರಿಂದ, ದಾನಿಗಳಿಂದ, ಖಾಸಗಿ, ಸರ್ಕಾರಿ, ಅರೆ ಸರ್ಕಾರಿ ಸಂಸ್ಥೆಗಳಿಂದ ಚಂದಾ, ದಾನ ಮತ್ತು ಕೊಡುಗೆಗಳನ್ನು ಸ್ವೀಕರಿಸುವುದು. ಸಂಘದ ಎಲ್ಲಾ ಲೆಡ್ಜರಗಳು, ದಾಖಲೆಗಳು ಇತ್ಯಾದಿ ಪುಸ್ತಕಗಳನ್ನು ತಮ್ಮ ವಶದಲ್ಲಿಟ್ಟುಕೊಂಡು ಮುಂದೆ ಆಯ್ಕೆಯಾಗುವ ಪ್ರಧಾನ ಕಾರ್ಯದರ್ಶಿಗೆ ಸ್ವೀಕೃತಿ ಪಡೆದು ಪ್ರಭಾರ ವಹಿಸಿಕೊಡುವುದು.

ಇಲಾಖೆ, ಸರ್ಕಾರ, ಸರ್ಕಾರೇತರ ಸಂಸ್ಥೆಗಳಾದರೆ ಸಂಘದ ಧ್ಯೇಯೋದ್ದೇಶಗಳ ಈಡೇರಿಕೆಗೆ ಪತ್ರ ವ್ಯವಹಾರ ನಡೆಸುವುದು, ಪ್ರತಿವರ್ಷ ತಪ್ಪದೇ ಸಂಘದ ಅಡಿಟ್ ಆದ ಲೆಕ್ಕಪರಿಶೋಧನೆ, ಆರ್ಥಿಕ ತಃಖ್ತೆ ಗಳು, ಕಾರ್ಯಕಾರಿ ಸಮಿತಿ ಪಟ್ಟಿ, ಸರ್ವ ಸದಸ್ಯರ ಸಭೆಯ ನಡವಳಿಯನ್ನು ಜಿಲ್ಲಾನೋಂದಣಾಧಿ ಕಾರಿಗಳಿಗೆ ಸಲ್ಲಿಸುವುದು. ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ 1960ರ ರೀತ್ಯಾ ಆಯಾಯ ಕಾಲಕ್ಕೆ ನಿರ್ವಹಿಸಬೇಕಾದ ಸಂಸ್ಥೆಯ ಜವಾಬ್ದಾರಿಗಳನ್ನು ನಿರ್ವಹಿಸುವುದು.

ಸಂಘದ ಲೆಕ್ಕಪತ್ರಗಳನ್ನು ತಪ್ಪದೆ ಪ್ರತಿ ವರ್ಷವು ಕಾಲ ಕಾಲಕ್ಕೆ ಸಂಘಗಳ ನೋಂದಣಾಧಿಕಾರಿಗಳಲ್ಲಿ ದಾಖಲಿಸಿಕೊಂಡು ಬರುವುದು. ಸಂಘದ ಪರವಾಗಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳಲ್ಲಿ ವ್ಯವಹರಿಸುವುದು ಹಾಗೂ ಕೋರ್ಟು, ಕಛೇರಿ ವ್ಯವಹಾರಗಳನ್ನು ನೋಡಿಕೊಂಡು ಬರುವುದು.

**ಖಜಾಂಚಿಃ -**

ಖಜಾಂಚಿಯವರು ಸಂಘದ ನಿಧಿಗಳ ಸುಪದಶನ್ನು ಹೊಂದಿರುತ್ತಾರೆ. ಸಂಘದ ಹಣವನ್ನು ಸ್ವೀಕರಿಸಲು ಮತ್ತು ಪಾವತಿಸಲು ಹಾಗೂ ತಾವು ಸ್ವೀಕರಿಸಿದ ಮತ್ತು ಪಾವತಿಸಿದ ಎಲ್ಲಾ ಲೆಕ್ಕಗಳ ಪೂರ್ಣ ಹಾಗೂ ಕರಾರುವಾಕ್ ಆದ ಲೆಕ್ಕವನ್ನು ಸಂಘದ ಲೆಕ್ಕಪತ್ರಗಳಲ್ಲಿ ಸರಿಯಾಗಿ ಮತ್ತು ಕ್ರಮಬದ್ಧವಾಗಿ ನಿರ್ವಹಿಸಲು ಮತ್ತು ಪೂರಕ ಕಾಗದಪತ್ರಗಳನ್ನು ನಿರ್ವಹಿಸಲು ಅವರು ಜವಾಬ್ದಾರರಾಗಿರುತ್ತಾರೆ. ಮತ್ತು ಸದಸ್ಯರಿಂದ, ದಾನಿಗಳಿಂದ, ಸಂಸ್ಥೆಗಳಿಂದ, ಸರ್ಕಾರದಿಂದ, ಸರ್ಕಾರೇತರ ಸಂಸ್ಥೆಗಳಿಂದ ಸ್ವೀಕರಿಸುವ ವಂತಿಗೆ, ಕೊಡುಗೆ, ದಾನ ಇತ್ಯಾದಿ ಹಣಕ್ಕೆ ರಸೀದಿ ಹಾಕಿ ಸ್ವೀಕೃತಿ ನೀಡುವುದು.

1.
2.
3.
4.
5.
6.
7.
8.

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ★ ಬೆಂಗಳೂರು ★

ಸಪ್ತಗಿರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಫ್ಯಾಕಲ್ಟಿ ಅಸೋಸಿಯೇಷನ್

ಸಂಘದ ಹೆಸರು:
ದಾಖಲೆಗಳ ವಿವರ: ನಿಯಮ ನಿಬಂಧನೆಗಳು
ಸ್ವೀಕರಿಸಿದ ದಿನಾಂಕ: 21-06-2011
ನೋಂದಣಿ ಸಂಖ್ಯೆ: 84/11-12
ರಿಜಿಸ್ಟ್ರಾರ್‌ನಲ್ಲಿನ ಕ್ರಮಸಂಖ್ಯೆ: 89/11-12
ವಿಲೇಯಾದ ವಿವರ: ನೊಂದಾಯಿಸಿದೆ
ದಿನಾಂಕ: 28-06-2011

ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು
ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ
ಬೆಂಗಳೂರು.